**David G. Devaraj**
District Apostle Helper

**New Apostolic Church**
India

ಪ್ರೀತಿಯುಳ್ಳ ಸಹೋದರರೇ, ಸಹೋದರಿಯರೇ, ಸ್ನೇಹಿತರೇ ಹಾಗು ಅತಿಥಿಗಳೇ,

**ವಿಷಯ: ಒಂದು ಐತಿಹಾಸಿಕ ನಿರ್ಣಯ – ಸೇವಾಸ್ಥಾನದಲ್ಲಿ ಸ್ತ್ರೀಯರು**

ಆಧಾರ ವಿಷಯ: ನಮ್ಮ ಮುಖ್ಯ ಅಪೊಸ್ತಲರಾದ ಜಾನ್ ಲುಕ್ ಶ್ನಾಯಿಡರ್‌ರವರ ವಿಡಿಯೋ ಸಂದೇಶ ದಿನಾಂಕ ಸೆಪ್ಟೆಂಬರ್ 20, 2022.

ನಾನು ನಿಮಗೆ ಒಂದು ಪತ್ರದ ಮೂಲಕ ಸಂಪರ್ಕಿಸಿ ಸುಮಾರಷ್ಟು ಸಮಯವಾಯಿತು, ಮತ್ತು ನಮ್ಮನ್ನು ಆವರಿಸಿಕೊಂಡಿರುವ ಕೆಟ್ಟದ್ದರ ವಿರುದ್ಧ ನೀವೆಲ್ಲರು ಹೋರಾಡುತ್ತಾ ನಮ್ಮ ಪ್ರೀತಿಯ ದೇವರಿಗೆ ಇನ್ನೂ ಹತ್ತಿರವಾಗುವುದರಲ್ಲಿ ಸಫಲರಾಗಿರುವಿರೆಂದು ವಿಶ್ವಾಸಿಸುತ್ತೇನೆ.

"ಸೇವಾಸ್ಥಾನದ ಪರಿಕಲ್ಪನೆ" ಎಂಬ ವಿಷಯದ ಕುರಿತು ಚಿಂತನೆಮಾಡಿ ಇದರ ಹೊಸ ತಿಳುವಳಿಕೆಯ ಹೊಂದಾಣಿಕೆಯಲ್ಲಿರಲು ಅಗತ್ಯವಾದ ಬದಲಾವಣೆಗಳನ್ನು ಮಾಡಿದ ನಂತರ, ಇದರ ಮುಂದಿನ ಭಾಗ, ಅಂದರೆ, "ಸೇವಾಸ್ಥಾನದಲ್ಲಿ ಸ್ತ್ರೀಯರು" ಎಂಬ ವಿಷಯವು ಹಲವು ವರ್ಷಗಳಿಂದ ನಮ್ಮ ಮುಖ್ಯ ಅಪೊಸ್ತಲರ, ಜಿಲ್ಲಾ ಅಪೊಸ್ತಲರ, ಹಾಗು ಇಡೀ ಜಗತ್ತಿನ ಅಪೊಸ್ತಲರ ಆಲೋಚನೆಗಳಲ್ಲಿತ್ತು. ಈ ವಿಷಯದ ಕುರಿತು ನಮ್ಮ ಚರ್ಚಿನ ನಿಲುವು ಏನಾಗಿರುವುದೆಂದು ಅನೇಕರು ಕುತುಹಲದಿಂದ ಕಾದಿರುವರು, ಮತ್ತು ಈಗ ನೀವೆಲ್ಲರು ಸ್ವತಃ ನಮ್ಮ ಮುಖ್ಯ ಅಪೊಸ್ತಲರಿಂದಲೇ ಇದನ್ನು ಕೇಳುವವರಾಗಿರುತ್ತೀರಿ.

ಆತ್ಮೀಯ ಸೇವಕರೇ, ಸಹೋದರರೇ, ಸಹೋದರಿಯರೇ ಮತ್ತು ಸ್ನೇಹಿತರೇ, ಮೊದಲ ಹಲವು ಪ್ರವಚನಗಳು ಆಂಗ್ಲ ಭಾಷೆಯಲ್ಲಿದ್ದಾಗ್ಯೂ, ನೀವೆಲ್ಲರು ಅದನ್ನು ಕೇಳಿಸಿಕೊಳ್ಳಬೇಕೆಂದು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇನೆ, ಮತ್ತು ಇದನ್ನು ಪ್ರತಿಯೊಂದು ಸಭೆಯಲ್ಲಿ ಪ್ರಸಾರಣೆ ಮಾಡಬೇಕೆಂದು ನಮ್ಮ ಮುಖ್ಯ ಅಪೊಸ್ತಲರು ಇಚ್ಛಿಸುತ್ತಿರುವರು. ಮುಂದಿನ ದಿನಗಳಲ್ಲಿ ಈ ವಿಷಯವು ಸಂಬೋಧಿಸಲಾದಾಗ ಇದು ನಮಗೆ ಸಹಾಯಕವಾಗಿರುವುದು. ನಮ್ಮ ಮುಖ್ಯ ಅಪೊಸ್ತಲರ ವಿಡಿಯೋ ಸಂದೇಶವು ಯೂರೋಪ್‌ನಲ್ಲಿ ಸಾಯಂಕಾಲ ಸಮಯದಲ್ಲಿ ಪ್ರಸಾರಗೊಳ್ಳುವುದು, ಆಗ ನಮಗೆ ರಾತ್ರಿ ಸಮಯವಾಗಿರುವುದು. ಭಾರತದಲ್ಲಿ ಇದು 21ರಂದು ಮುಂಜಾನೆ ಸಾರ್ವಜನಿಕವಾಗುವುದು. ಈ ಸಂದೇಶವನ್ನು ಸಾಧ್ಯವಾದಷ್ಟು ಹೆಚ್ಚಾಗಿ ಕೇಳಲು ದಯವಿಟ್ಟು ಪ್ರತಿಯೊಂದು ಅವಕಾಶವನ್ನು ಬಳಸಿಕೊಳ್ಳಿರಿ, ಏಕೆಂದರೆ ಸಮಯ ಬಂದಾಗ ನಮ್ಮ ನಿಲುವನ್ನು ಸಮರ್ಥಿಸಿಕೊಳ್ಳಲು ಇದು ನಮೆಲ್ಲರಿಗೂ ಸಹಾಯಮಾಡುತ್ತದೆ. ನಾವು ನಮ್ಮ ವೆಬ್‌ಸೈಟ್, ಫೇಸ್‌ಬುಕ್, ಮುಂತಾದವುಗಳ ಲಿಂಕ್ ಕೂಡ ನಿಮಗೆ ಒದಗಿಸಿ ಕೊಡುತ್ತೇವೆ.

ಮುಂದಿನ ಹೆಜ್ಜೆಯಾಗಿ, ಅಪೊಸ್ತಲರು ನಿಮಗೆ 'ಝೂಮ್'' ಲಿಂಕ್ ಕೊಡುವರು (ಬಹುಶಃ ಸೆಪ್ಟೆಂಬರ್ 21ಕ್ಕಾಗಿ – ಬುಧುವಾರ, ಸಾಯಂಕಾಲ ಸುಮಾರು 7 ಗಂಟೆ). ದಯವಿಟ್ಟು ಇದಕ್ಕೆ ಜೋಡಣೆಯಾಗಿ ಈ ನಿರ್ಣಯಕ್ಕೆ ಮೂಲ ಕಾರಣವಾಗಿರುವ ವಿವರಗಳನ್ನು ಗ್ರಹಿಸಿಕೊಳ್ಳಲು ಪ್ರಯತ್ನಿಸಿರಿ. ಒಂದು ವೇಳೆ ಅಗತ್ಯವಿದ್ದರೆ ಅಪೊಸ್ತಲರು ಹೆಚ್ಚಿನ 'ಝೂಮ್' ಮೀಟಿಂಗ್‌ಗಳನ್ನು ಏರ್ಪಡಿಸಬಹುದು.

ನಂತರ ಇದು, ನಮ್ಮ ಮಧ್ಯೆ ಚರ್ಚಿಸುವ ಅವಕಾಶಗಳನ್ನು ನಿರ್ಮಿಸಲು ಮತ್ತು ನಮ್ಮ ಸಭೆಯಲ್ಲಾಗಿರುವ ಈ ಐತಿಹಾಸಿಕ ಬದಲಾವಣೆಯೊಂದಿಗೆ ಹೊಂದಿಕೊಳ್ಳಲು ನಮಗೆ ಸಹಾಯಮಾಡುವಂತೆ ಇದನ್ನು ಕನಿಷ್ಟಪಕ್ಷ ಆರು ಭಾಷೆಗಳಲ್ಲಿ ಭಾಷಾಂತರಿಸಲಾಗುವುದು.

ಪ್ರಿಯ ಸ್ನೇಹಿತರೇ, ನಮ್ಮ ಪ್ರಿಯ ಕರ್ತನಾದ ಯೇಸುವು ಅಪೊಸ್ತಲರ ಮೂಲಕ ಸ್ಥಾಪಿಸಿದ ರಕ್ಷಣೆಯ ಕಾರ್ಯವನ್ನೂ, ಆತನ ಸಭೆಯ ಪರಿಪೂರ್ಣತೆಗಾಗಿ ತೆಗೆದುಕೊಳ್ಳಬೇಕಾದ ನಿರ್ಣಯಗಳನ್ನೂ ಹಾಗು ಸಮಯೋಚಿತವಾದ ಪ್ರಕಟನೆಗಳನ್ನೂ ಅರ್ಥಮಾಡಿಕೊಳ್ಳುವ ನಿಮ್ಮ ಯಾತ್ರೆಯಲ್ಲಿ ನಾನು ನಿಮ್ಮೆಲ್ಲರಿಗೂ ಹೆಚ್ಚಿನ ಸಂತೋಷವನ್ನು ಆಶಿಸುತ್ತೇನೆ.

ಪ್ರಕಟನೆ 22: 20ರಲ್ಲಿ "... ಹಾಗೆಯೇ ಆಗಲಿ; ಕರ್ತನಾದ ಯೇಸುವೇ, ಬಾ" ಎಂದು ಕೂಗುವ ಆತ್ಮನೊಂದಿಗೆ ನಾನು ಸಹ ಐಕ್ಯಗೊಳ್ಳುತ್ತೇನೆ.



ಡೇವಿಡ್ ದೇವರಾಜ್

ದಿನಾಂಕ: 20 ಸೆಪ್ಟೆಂಬರ್ 2022
ಸ್ಥಳ: ಬೆಂಗಳೂರ

**New Apostolic Church**
**India**

No. 5, Promenade Road
Frazer Town, Bangalore 560 005
Tel.: +91 (0) 80 2530 1211
Fax: +91 (0) 80 2557 7691
E-Mail: daviddevaraj.naci@gmail.com
www.nacindia.org